# ಬುತ್ತಿ ಚಿಗುರು

## ಪಾಕಡಾ ವ್ಯಾಪಾರಿ!

ಓರ್ವ ವ್ಯಾಪಾರಿ ತನ್ನ ಹಳೆ ಗ್ರಾಹಕನ ಮದುವೆಗೆ ಬಂದಿದ್ದ. ಅಲ್ಲಿ ಊಟ ಉಪಚಾರ ಮುಗಿದ ಮೇಲೆ ತಾಂಬೂಲ ತೆಗೆದುಕೊಂಡ ಅನಂತರ ತನ್ನ ಗ್ರಾಹಕನಿಗೆ ಒಂದು ಕವರ್ ಕೊಟ್ಟು, ಶುಭ ಕೋರಿ ಹೊರಟು ಹೋದ. ಮಾರನೇ ದಿನ ಆ ಗ್ರಾಹಕ ತನ್ನ ಮದುವೆಗೆ ಬಂದಿದ್ದ ಉಡುಗೊರೆ ಮತ್ತು ಕವರ್‌ಗಳನ್ನು ಬಿಚ್ಚಲು ಕುಳಿತ. ಆಗ ಆ ವ್ಯಾಪಾರಿ ಕೊಟ್ಟಿದ್ದ ಕವರಿನಲ್ಲಿ ಹಣ ಅಥವಾ ಚೆಕ್ ಇರಲಿಲ್ಲ.ಬದಲಿಗೆ ಒಂದು ಕಾಗದವಿತ್ತು. ಅದರಲ್ಲಿ ಆ ವ್ಯಾಪಾರಿ, ‘ಹಿಂದಿನ ಬಾಕಿ ₹ 1,800 ಇದೆ. ಅದರಲ್ಲಿ ನಿನ್ನ ಮದುವೆಗೆ ನನ್ನಿಂದ 500 ರೂಪಾಯಿ ಕಾಣಿಕೆ ಅಂತ ಇಟ್ಟುಕೊಂಡು, ಉಳಿದ ₹ 1300 ರೂಪಾಯಿಯನ್ನು ಆದಷ್ಟು ಬೇಗ ಪಾವತಿಸು’ ಎಂದು ಬರೆದಿದ್ದ.

**ಅರವಿಂದ ಜಿ.ಜೋಷಿ**





## ಸಮಾನತೆ

ಅಕ್ಕಪಕ್ಕದ ಮನೆಯವರು ತಿಮ್ಮನಿಗೆ, ‘ಪ್ರತಿವರ್ಷ ವರಮಹಾಲಕ್ಷ್ಮಿ ಪೂಜೆಯ ದಿನ ನಿನ್ನ ಹೆಂಡತಿ ಮೈಮೇಲೆ ಕಾಳಿ ಬರುತ್ತಿದ್ದಳು. ಈ ವರ್ಷ ಯಾಕೆ ಬರಲಿಲ್ಲ?’ ಎಂದು ಕೇಳಿದರು. ತಿಮ್ಮ, ‘ಈ ವರ್ಷ ನನ್ನ ಹೆಂಡತಿಗೂ ಐದುಸಾವಿರ ರೂಪಾಯಿ ಮೌಲ್ಯದ ರೇಷ್ಮೆ ಸೀರೆ, ವರಮಹಾಲಕ್ಷ್ಮಿಗೂ ಐದುಸಾವಿರದ ರೇಷ್ಮೆ ಸೀರೆ ತಂದಿರುವೆ. ಹಾಗಾಗಿ, ಇಬ್ಬರೂ ಶಾಂತವಾಗಿದ್ದಾರೆ’ ಎಂದ.

**ಮಹಾಂತೇಶ ಬಾಗೇವಾಡಿ**